ಎಂದು ಹೇಳಿದ್ದಿರಿ. ಬೆಲ್ ಹಾಕಿದ ತಕ್ಷಣ ಅಧಿವೇಶನದಲ್ಲಿ ಹಾಜರಿರುವುದು ನಮ್ಮ ಕರ್ತವ್ಯ. ಏಕೆ ಪ್ರತಿ ದಿವಸ ಇಂಥ ಪ್ರಸಂಗಗಳಿಗೆ ಅವಕಾಶಕೊಡುತ್ತೀರಿ?

(ಈ ಹಂತದಲ್ಲಿ ಉಪ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪನವರು ಸದನಕ್ಕೆ ಆಗಮಿಸಿದರು)

**ಉಪಾಧ್ಯಕ್ಷರು** : ಬಂದರಲ್ಲಾ, ಟೆನ್ ಮಿನಿಟ್ಸ್ ಲೇಟ್‌ಆಗಿ ಬಂದಿದ್ದಾರೆ. ಈಗ ಒಂದು ಪ್ರಕಟಣೆ ಇದೆ.

## 6. ಪ್ರಕಟಣೆ

**ವಿಷಯ:** ಮಾನ್ಯ ಸದಸ್ಯರುಗಳಾದ ಶ್ರೀ ಯು.ಟಿ. ಷರೀದ್ ಮತ್ತು ಶ್ರೀ ಎಂ.ಟಿ.ಬಿ. ನಾಗರಾಜು ಅವರುಗಳಿಗೆ ಪ್ರಸಕ್ತ ಅಧಿವೇಶನದಲ್ಲಿ ಗೈರು ಹಾಜರಾಗಲು ಅನುಮತಿ ನೀಡುವ ಬಗ್ಗೆ.

**ಉಪಾಧ್ಯಕ್ಷರು** : ದಿನಾಂಕ 16–3–2006ರಿಂದ ಪ್ರಾರಂಭವಾಗಿರುವ ಪ್ರಸಕ್ತ ಅಧಿವೇಶನದಲ್ಲಿ ಅನಾರೋಗ್ಯದ ಕಾರಣದಿಂದ, ಅಧಿವೇಶನ ಮುಕ್ತಾಯವಾಗುವವರೆಗೆ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ನೀಡುವಂತೆ ಮಾನ್ಯ ಸದಸ್ಯರುಗಳಾದ ಶ್ರೀ ಯು.ಟಿ. ಫರೀದ್ ಹಾಗೂ ಎಂ.ಟಿ.ಬಿ. ನಾಗರಾಜು ಅವರುಗಳು ಕೋರಿರುತ್ತಾರೆ.

**ಉಪಾಧ್ಯಕ್ಷರು** : ಈಗ ಮಾನ್ಯ ಮಾಧುಸ್ವಾಮಿಯವರು.

ಮಾನ್ಯ ಸದಸ್ಯರುಗಳು ಗೈರುಹಾಜರಾಗಲು ಸದನವು ಸಮ್ಮತಿಸುತ್ತದೆಯೇ?

**ಸದನವು ಒಪ್ಪಿಗೆ ಸೂಚಿಸಿತು**

**ಉಪಾಧ್ಯಕ್ಷರು** : ಮಾನ್ಯ ಸದಸ್ಯರುಗಳ ಗೈರು ಹಾಜರಿಗೆ ಅನುಮತಿ ನೀಡಲಾಗಿದೆ.

## 7. ವಿತ್ತೀಯ ಕಾರ್ಯಕಲಾಪ

### 2006–07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ:

**ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) (ಮುಂದುವರೆದ ಭಾಷಣ)** : ಮಾನ್ಯ ಉಪಾಧ್ಯಕ್ಷರೇ, ನಾನು ತೋಟಗಾರಿಕಾ ಬೆಳೆಗಳ ಬಗ್ಗೆ ಮಾತನಾಡುತ್ತಾ, ತೆಂಗಿನ ಬಗ್ಗೆ ಹೇಳುತ್ತಿದ್ದೆ. ತೆಂಗಿನ ರೋಗ ನಿಯಂತ್ರಣಕ್ಕೆ ಸರ್ಕಾರ ಮಾಡಿರುವಂಥ ಕಾರ್ಯಕ್ರಮ ಅತ್ಯಲ್ಪ. ಈ ಕಡೆ ಹೆಚ್ಚು ಗಮನ ಕೊಡಬೇಕಾಗಿತ್ತು. 44 ಲಕ್ಷದ 89 ಸಾವಿರ ಎಕರೆ ಪ್ರದೇಶದಲ್ಲಿರುವಂಥ ತೆಂಗಿನ ನುಸಿ ರೋಗ ನಿವಾರಣೆಗೆ 24 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದರೆ ಅದರ ಗತಿಯೇನಾಗಬೇಕು? ಎರಡನೆಯದಾಗಿ, ಈಗ ತೆಂಗಿಗೆ ಬೆಲೆ ಬಹಳ ಕುಸಿದುಬಿಟ್ಟಿದೆ. ಇದು ಸನ್ಮಾನ್ಯ ಯಡಿಯೂರಪ್ಪನವರಿಗೆ ಗೊತ್ತೋ, ಇಲ್ಲವೊ? ಒಂಬತ್ತು ಸಾವಿರ ರೂಪಾಯಿಗಳಿದ್ದ ಕೊಬ್ಬರಿ ಧಾರಣೆ ಐದೂಮುಕ್ಕಾಲು ಸಾವಿರಕ್ಕೆ ಇಳಿದಿದೆ. ಮಾರ್ಕೆಟ್ ಇಂಟರ್‌ವೆನ್‌ಷನ್ ಆಗುತ್ತೇವೆ. ನಾವು ಸಪೋರ್ಟ್ ಪ್ರೈಸ್ ಕೊಡುತ್ತೇವೆ ಎಂದು ಹೇಳುತ್ತಿದ್ದರು. ಆದರೆ ಈವರೆಗೆ ಕೊಬ್ಬರಿ ಬಗ್ಗೆ ಏನೂ